

## ಉಪ್ಪಿ-ಸುದೀಪ್ 'ದೀಪಾವಳಿ'

ಕನ್ನಡ ಚಿತ್ರರಂಗದ ಪಾಲಿಗೆ ಈ ವರ್ಷದ ದೀಪಾವಳಿ ಜೋರಾಗಿರಲಿದೆ. ಭಾರೀ ಬಜೆಟ್ ಹಾಗೂ ತಾರಾ ವರ್ಚಸ್ಸಿನ ನಟರ ಚಿತ್ರಗಳು ದೀಪಾವಳಿ ಸಂದರ್ಭದಲ್ಲಿ ತೆರೆ ಕಾಣುವ ತವಕದಲ್ಲಿವೆ. ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿರುವ ಸಿನಿಮಾ 'ಮುಕುಂದ ಮುರಾರಿ'.

ಸುದೀಪ್ ಹಾಗೂ ಉಪೇಂದ್ರ ಒಟ್ಟಿಗೆ ನಟಿಸಿರುವುದು 'ಮುಕುಂದ ಮುರಾರಿ' ಚಿತ್ರದ ಹೈಲೈಟ್. ಇಬ್ಬರು ಸೂಪರ್‌ಸ್ಟಾರ್‌ಗಳು ಒಟ್ಟಿಗೆ ನಟಿಸಿರುವ ಚಿತ್ರ ಅಭಿಮಾನಿಗಳ ಪಾಲಿಗೆ ಹಬ್ಬದ ಸಂಭ್ರಮ ಸೃಷ್ಟಿಸಿದೆ. ಚಿತ್ರದ ಕಥೆಯ ಬಗ್ಗೆ ಚಿತ್ರತಂಡ ಸುಳಿವು ಬಿಟ್ಟುಕೊಟ್ಟಿಲ್ಲ. ಚಿತ್ರೀಕರಣ ಕೂಡ ಸದ್ದುಗದ್ದಲವಿಲ್ಲದೆ ನಡೆದಿದೆ. ಆದರೆ, ಈಗ ಬಿಡುಗಡೆಯಾಗಿರುವ ಚಿತ್ರದ ಪೋಸ್ಟರ್‌ಗಳು ಪ್ರೇಕ್ಷಕರ ನಿರೀಕ್ಷೆಯ ಜ್ವರವನ್ನು ಹೆಚ್ಚಿಸುವಂತಿವೆ.

'ವಿಕ್ಟರಿ', 'ಅಧ್ಯಕ್ಷ' ರೀತಿಯ ಯಶಸ್ವಿ ಚಿತ್ರಗಳನ್ನು ರೂಪಿಸಿದ್ದ ನಂದಕಿಶೋರ್ 'ಮುಕುಂದ ಮುರಾರಿ'ಯ ನಿರ್ದೇಶಕರು. ಈ ಬಾರಿ ಅವರು ಹಿಂದಿಯ 'ಓ ಮೈ ಗಾಡ್' ಚಿತ್ರವನ್ನು ಕನ್ನಡಕ್ಕೆ ಅಳವಡಿಸಿದ್ದಾರೆ.



ಉಪೇಂದ್ರ, ಸುದೀಪ್ ಮಾತ್ರವಲ್ಲ – 'ಮುಕುಂದ ಮುರಾರಿ' ಚಿತ್ರದ ಉಳಿದ ತಾರಾಗಣದ ಆಕರ್ಷಣೆಯೇನೂ ಕಡಿಮೆಯಿಲ್ಲ. ನಿಖಿತಾ, ಭಾವನಾ, ರಚಿತಾರಾಮ್, ಅವಿನಾಶ್, ದೇವರಾಜ್, ರವಿಶಂಕರ್, ಪ್ರಕಾಶ್ ಬೆಳವಾಡಿ, ತಬಲಾ ನಾಣಿ, ಕುರಿ ಪ್ರತಾಪ್ ಸೇರಿದಂತೆ ಖ್ಯಾತನಾಮರ ಹಿಂಡು ಚಿತ್ರದಲ್ಲಿದೆ. ಸುಧಾಕರ್ ರಾಜ್ ಛಾಯಾಗ್ರಹಣ ಹಾಗೂ ಅರ್ಜುನ್ ಜನ್ಯ ಸಂಗೀತ ಚಿತ್ರಕ್ಕಿದೆ.



## ಆತ್ಮವಿಶ್ವಾಸದಲ್ಲಿ 'ಸಂತು'

'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ' ಚಿತ್ರದ ನಂತರ ಯಶ್ ಹಾಗೂ ರಾಧಿಕಾ ಪಂಡಿತ್ ಜೋಡಿಯಾಗಿ ನಟಿಸಿರುವ ಚಿತ್ರ 'ಸಂತು ಸ್ಟ್ರೈಟ್ ಫಾರ್ವರ್ಡ್'. ಮಹೇಶ್ ರಾವ್ ನಿರ್ದೇಶನದ ಈ ಚಿತ್ರ ತೆರೆ ಕಾಣಲು ಕೊನೆಯ ಕ್ಷಣಗಳ ತಯಾರಿ ನಡೆಸಿದೆ.

ವಿವಾಹದ ಹೊಸ್ತಿಲಲ್ಲಿ ನಿಂತಿರುವ ಯಶ್–ರಾಧಿಕಾ ಜೋಡಿಯ 'ಮೊಗ್ಗಿನ ಮನಸು', 'ಡ್ರಾಮಾ', 'ರಾಮಾಚಾರಿ' – ಈ ಎಲ್ಲ ಚಿತ್ರಗಳೂ ದೊಡ್ಡ ಯಶಸ್ಸು ಗಳಿಸಿವೆ. ಹಾಗಾಗಿ 'ಸಂತು' ಚಿತ್ರದ ಗೆಲುವಿನ ಬಗ್ಗೆಯೂ ಚಿತ್ರತಂಡ ಆತ್ಮವಿಶ್ವಾಸ ಹೊಂದಿದೆ. ಯುರೋಪ್‌ನ ರಮ್ಯ ಹೊರಾಂಗಣದಲ್ಲಿ ಚಿತ್ರೀಕರಣ ನಡೆಸಿರುವುದು 'ಸಂತು'ವಿನ ಸೌಂದರ್ಯ ಹೆಚ್ಚಿಸಿದೆಯಂತೆ. ತಮಿಳಿನ ಶ್ಯಾಮ್ ಚಿತ್ರದ ಮುಖ್ಯಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ.

ನಿರ್ದೇಶಕ ಮಹೇಶ್‌ರಾವ್ ಸದಭಿರುಚಿಯ ಚಿತ್ರಗಳಿಗೆ ಹೆಸರಾದವರು. ಮೊದಲ ಬಾರಿಗೆ ಅವರು ಯಶ್‌ರಂಥ ತಾರಾವರ್ಚಸ್ಸಿನ ನಟನ ಜೊತೆ ಕೆಲಸ ಮಾಡಿರುವುದು ಕುತೂಹಲಕರವಾಗಿದೆ. ಹರಿಕೃಷ್ಣ ಸಂಗೀತ ಸಂಯೋಜನೆಯ ಗೀತೆಗಳು ಕಳೆದ ವಾರದಿಂದಲೇ ಕೇಳುಗರಿಗೆ ಲಭ್ಯವಿವೆ. 'ಸೆಲ್ಫ್ ಮೇಡ್ ಶೆಹಜಾದೆ', 'ತಂಗಾಳಿಯಲ್ಲಿ' ಸೇರಿದಂತೆ ಚಿತ್ರದಲ್ಲಿನ ಎಲ್ಲ ಗೀತೆಗಳೂ ಜನಪ್ರಿಯ ಶೈಲಿಯಲ್ಲಿದ್ದು, ಯಶ್ ವರ್ಚಸ್ಸಿಗೆ ನೀರೆರೆಯುವಂತಿವೆ. ಯಶ್‌ರ ಹಿಂದಿನ ಚಿತ್ರ 'ಮಾಸ್ಟರ್‌ಪೀಸ್' ನಿರೀಕ್ಷೆಯಷ್ಟು ಯಶಸ್ಸು ಕಾಣಲಿಲ್ಲ. ಆ ನಿರಾಶೆಯನ್ನು 'ಸಂತು' ಮರೆಸುವ ನಿರೀಕ್ಷೆ ಚಿತ್ರತಂಡದ್ದು.